ಜಿಲ್ಲೆಯವರೇ ಎಂದು ಕಾಣುತ್ತದೆ. ಅವರು ಕೊಟ್ಟಿರುವ ಒಂದಿ ಇದೆ. ಮಾನ್ಯ ಶಿವನಂಜಪ್ಪನವರಿಂದ ಪತ್ರ ಬಂದಮೇಲೆ ಅವರನ್ನೇ ನೋಡಿಕೊಂಡು ಬನ್ನಿ ಎಂದು ಹೇಳಿದೆ. ಹೋಗಿ ನೋಡಿದ್ದಾರೆ. ಆವರ ವರದಿಯ ಆಧಾರದ ಮೇಲೆ ಹೇಳುತ್ತಿದ್ದೇನೆ. ಟ್ಯಾಂಕ್ ಕಟ್ಟುವುದು ಫೀಸಿಬಲ್ ಅಲ್ಲ ಎಂದು ಬರೆಯುತ್ತಾರೆ. ಬೇಕಾದರೆ ನಿಮ್ಮ ಜೊತೆಯಲ್ಲಿ ಅವರನ್ನು ಕಳುಹಿಸಿಕೊಡುತ್ತೇನೆ. ನನಗೇನೂ ಅಡ್ಡಿಯಿಲ್ಲ. ಇದು ನನಗೆ ಬಂದಿರುವ ವರದಿ.

ಬಾಗಲ ಕೋಟೆಯಲ್ಲಿ ಉದಗಟ್ಟಿ ಯಾತ ನೀರಾವರಿ ಯೋಜನೆ

೭೯೨. ಜಿ. ವಿ. ಮಂಟೂರ್ (ಬಾಗಲಕೋಟೆ).— ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉದಗಟ್ಟಿ ಯಾತ ನೀರಾವರಿ ಯೋಜನೆಯನ್ನು ನಿರ್ಮಾಣ ಮಾಡುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಇದರ ಅಂದಾಜು ವೆಚ್ಚವೆಷ್ಟು ?

ಇ) ಸದರಿ ಯೋಜನೆಯಿಂದ ನೀರಾವರಿಯಾಗುವ ಕ್ಷೇತ್ರವೆಷ್ಟು ?

ಈ) ಈ ಯೋಜನೆಯಿಂದ ಪ್ರಯೋಜನ ಪಡೆಯುವ ಗ್ರಾಮಗಳು ಯಾವುವು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು.

ಆ) ೮.೮೪ ಲಕ್ಷ ರೂಗಳು (೧೯೮೪-೮೫ರ ದರ ಪಟ್ಟಿಯಂತೆ)

ಇ) ೪೦೦ ಎಕರೆಗಳು.

ಈ) ಉದಗಟ್ಟಿ ಗ್ರಾಮವು ಪ್ರಯೋಜನ ಪಡೆಯುತ್ತದೆ.

ಶ್ರೀ ಜಿ. ವಿ. ಮಂಟೂರ್.—ಮಾನ್ಯ ಮಂತ್ರಿಗಳು ೧೯೮೬-೮೭ನೇ ಸಾಲಿನಲ್ಲಿ ಕೆಲಸ ಶುರು ಮಾಡುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—೧೯೮೬-೮೭ನೇ ಸಾಲಿನ ಬಜೆಟ್ ನಿಮ್ಮ ಮುಂದೆ ಇಡಲಾಗಿದೆ. ಒಂದೇ ಮಾತು ಹೇಳುತ್ತೇನೆ. ಈ ಕೆಲಸ ೧೯೮೬-೮೭ನೇ ಸಾಲಿನ ಬಜೆಟ್‌ನಲ್ಲಿ ಸೇರಿದ್ದು ೨೦ ಸಾವಿರ ರೂಪಾಯಿಗಳು ಇದಕ್ಕೆ ಪ್ರಾವಿಷನ್ ಮಾಡಿದೆ. ಆದರೆ ಕೆಲಸ ಇನ್ನೂ ತೆಗೆದುಕೊಂಡಿಲ್ಲ. ಸ್ವಾಮಿ, ಈ ಸಂದರ್ಭದಲ್ಲಿ ಆಶ್ವಾಸನೆ ಕೊಡುತ್ತೇನೆ, ಈ ಕೆಲಸವನ್ನು ವರ್ಷ ಕೈಗೆತ್ತಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಯೋಜನೆಗಳಿಗಾಗಿ ೧೯೮೬-೮೭ನೇ ಸಾಲಿನಲ್ಲಿ ಖರ್ಚು ಮಾಡಿದ ಹಣದ ಬಗ್ಗೆ

೯೪೦ ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು). ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಯೋಜನೆಯನ್ವಯ ೧೯೮೬-೮೭ ರಲ್ಲಿ ಖರ್ಚು ಮಾಡಿರುವ ಹಣವೆಷ್ಟು. (ತಾಲ್ಲೂಕುವಾರು ವಿವರ ನೀಡಬೇಕಾಗಿ ವಿನಂತಿ)

ಆ) ಪುತ್ತೂರು ಕ್ಷೇತ್ರಕ್ಕೆ ಹೊಂದಿಕೊಂಡು ಇರುವ ಸಣ್ಣ ಆಣೆಕಟ್ಟು ಹಲವಾರು ವರುಷಗಳಿಂದ ರಿಪೇರಿಯಲ್ಲಿದ್ದು ನೀರನ್ನು ಸರಬರಾಜು ಮಾಡದಿದ್ದರೂ, ರೈತರಿಂದ ನೀರಿನ ತೆರಿಗೆಯನ್ನು ವಸೂಲಿ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

೫) ಸಣ್ಣ ಅಣೆಕಟ್ಟಿನ ರಿಪೇರಿ ಕೆಲಸ ಕಾರ್ಯಕ್ಕೆ ಹೆಚ್ಚಿನ ಆದ್ಯತೆ ಕೊಟ್ಟು ಇದರ ಪ್ರಯೋಜನ ರೈತರಿಗೆ ಮುಟ್ಟುವ ರೀತಿಯಲ್ಲಿ ಸರ್ಕಾರದವರ ಕ್ರಮ ಕೈ ಕೊಳ್ಳುವರೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಆ) ೩೭ ೮೭ ಲಕ್ಷ ರೂ.ಗಳು (ತಾಲ್ಲೂಕುವಾರು ವಿವರಗಳ ಪಟ್ಟಿಯನ್ನು ಲಗತ್ತಿಸಲಾಗಿದೆ).

ಆ) ನೀರೊದಗಿಸಿದಾಗ ಮಾತ್ರ ನೀರಿನ ತೆರಿಗೆಯನ್ನು ಫಲಾನುಭವಿಗಳಿಂದ ವಸೂಲು ಮಾಡ ಲಾಗುತ್ತಿದೆ.

೫) ಹಣಕಾಸಿನ ಲಭ್ಯತೆಯನ್ನವಲಂಬಿಸಿ ಹಂತ-ಹಂತವಾಗಿ ಕ್ರಮ ಕೈ ಗೊಳ್ಳಲಾಗುವುದು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೯೮೬-೮೭ರ ಸಾಲಿನಲ್ಲಿ ಸಣ್ಣ ನೀರಾವರಿ ಯೋಜನೆಗಳಿಗೆ ಆಗಿರುವ ವೆಚ್ಚ

(ತಾಲ್ಲೂಕುವಾರು ವಿವರಗಳ ಪಟ್ಟಿ)

(ಜನವರಿ ೧೯೮೭ರ ಅಂತ್ಯದವರೆಗೆ)

ಕ್ರಮ ಸಂಖ್ಯೆ	ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ತಾಲ್ಲೂಕುಗಳು	೧೯೮೬-೮೭ನೇ ಸಾಲಿನ ಯೋಜನೆಗಳ ವೆಚ್ಚ ರೂ. ಲಕ್ಷಗಳಲ್ಲಿ
೧	ಮಂಗಳೂರು	೫. ೨೭೮೫
೨	ಬಂಟ್ವಾಳ್	೦. ೫೭೦೫೨
೩	ಪುತ್ತೂರು	೬. ೩೫೩೭೪
೪	ಸುಳ್ಯ	೩. ೭೪೩೨೦
೫	ಉಡುಪಿ	೯. ೦೨೫೨೮
೬	ಕುಂದಾಪುರ	೯. ೧೨೦೫೬
೭	ಕಾರ್ಕಳ	೩. ೦೮೧೫೯
೮	ಬೆಳ್ತಂಗಡಿ	೦. ೬೯೯೦೧
	ಒಟ್ಟು	೩೭. ೮೭೧೧೮

ಶ್ರೀ ವಿನಯಕುಮಾರ್ ಸೂರಕೆ.—ನನ್ನ (ಆ) ಪ್ರಶ್ನೆಗೆ ಉತ್ತರವಾಗಿ ೩೭.೮೭ ಲಕ್ಷ ರೂಪಾಯಿ ಗಳನ್ನು ಒದಗಿಸಿದ್ದೇವೆಂದೂ ಅದರಲ್ಲಿ ಪುತ್ತೂರು ತಾಲ್ಲೂಕಿಗೆ ೬,೩೫,೩೭೪ ರೂಪಾಯಿಗಳನ್ನು ಒದಗಿಸ ಲಾಗಿದೆ ಎಂದೂ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಆ ಹಣವನ್ನು ಯಾವುದಕ್ಕೋಸ್ಕರ ಕೊಟ್ಟಿದ್ದುದು ? ರಿಪೇರಿಗೋಸ್ಕರ ಖರ್ಚು ಮಾಡುವುದಕ್ಕಾಗಿ ಕೊಟ್ಟಿದ್ದೆಯೇ ? ಅಥವಾ ಹೊಸ ಕಾಮಗಾರಿಗಳಿಗಾಗಿ ವಿನಿಯೋಗಿಸಲು ಕೊಟ್ಟಿದೆಯೇ ಅದನ್ನು ಮಾನ್ಯ ಮಂತ್ರಿಗಳು ಹೇಳಬೇಕು. ನಂತರ (ಆ) ಪ್ರಶ್ನೆಗೆ ಉತ್ತರವಾಗಿ ನೀರೊದಗಿಸಿದಾಗ ಮಾತ್ರ ನೀರಿನ ತೆರಿಗೆಯನ್ನು ಫಲಾನುಭವಿಗ ಳಿಂದ ವಸೂಲು ಮಾಡಲಾಗುತ್ತಿದೆ ಎಂಬುದಾಗಿ ಹೇಳಿದ್ದಾರೆ. ನಮ್ಮ ಪುತ್ತೂರು ತಾಲ್ಲೂಕಿನಲ್ಲಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೀರನ್ನು ಒದಗಿಸದಿದ್ದರೂ ನೀರಿನ ತೆರಿಗೆಯನ್ನು ವಸೂಲು ಮಾಡು ತ್ತಿದ್ದಾರೆ ಅದರ ಬಗ್ಗೆ ಸ್ಪಷ್ಟವಾದ ಉದಾಹರಣೆಯನ್ನು ಕೊಟ್ಟರೆ ಅದರ ಬಗ್ಗೆ ಮಾನ್ಯ ಮಂತ್ರಿ ಗಳು ಏನು ಕ್ರಮ ತೆಗೆದುಕೊಳ್ಳುತ್ತಾರೆಂಬುದನ್ನು ತಿಳಿಸಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—ಪುತ್ತೂರು ತಾಲ್ಲೂಕಿಗೆ ೬ ಲಕ್ಷ ರೂಪಾಯಿಗಳನ್ನು ಕೊಟ್ಟಿರು ವುದು ನಿಜ. ಇದನ್ನು ರಿಪೇರಿ ಸಲುವಾಗಿ ಕೊಡಲಾಗಿದೆ. Out of 49 irrigation works 20 are in good condition. The remaining 29 works require repairs.

The amount required for these works is Rs. 11.50 lakhs. About 7 minor irrigation works have been taken up for repairs. They are as follows.

> "Repairs to vented dam at Kattajaru in Kaniyar village Rs. 46,274; repairs to Payanthimegru vented dam in Bettampady Rs. 24,600 ; Special repairs to Kallapapu vented dam in Puttur taluk Rs. 13,000 repairs to flood gates Gundi anicut Rs. 19,320 repairs to vented dam in Panjigunta in Kedambady village Rs. 13,363 repairs to Lift Irrigation scheme at Yentithadka Rs. 17,396 and repairs to survey Lift Irrigation scheme 3,132..."

ಇದಾದ ಮೇಲೆ ತಕ್ಷಣವೇ ರಿಪೇರಿಯಾಗಬೇಕಾದ ಕೆಲಸಕಾರ್ಯಗಳ ಬಗ್ಗೆ ಅಂದಾಜನ್ನು ತಯಾರು ಮಾಡಿದ್ದಾರೆ. ಅದಕ್ಕಾಗಿ ೧,೪೩,೩೫೭ ರೂಪಾಯಿಗಳು ಬೇಕೆಂದು ಹೇಳಿದ್ದಾರೆ. ನಂತರ ಅನ್ ಗೋಯಿಂಗ್ ವರ್ಕ್ಸ್ ೨೨ ಕಾಮಗಾರಿಗಳನ್ನು ತೆಗೆದುಕೊಂಡಿದ್ದು ಅದಕ್ಕಾಗಿ ೬.೩೭ ರೂಪಾಯಿಗಳನ್ನು ಖರ್ಚು ಮಾಡಿ ರಿಪೇರಿ ಮಾಡಲಾಗಿದೆ. ಇನ್ನೂ ಕೆಲವು ಕಾಮಗಾರಿಗಳು ರಿಪೇರಿಯಾಗಬೇಕಾಗಿದ್ದು, ಇನ್ನು ಹದಿನೈದು ದಿವಸಗಳಲ್ಲಿ ಈ ರೀತಿಯ ಕಾಮಗಾರಿಗಳನ್ನು ಜಿಲ್ಲಾ ಪರಿಷತ್ತಿಗೆ ವರ್ಗಾವಣೆ ಮಾಡಲಿತ್ತಿದ್ದೇವೆ. ಹೇಗೂ ಜಿಲ್ಲಾಪರಿಷತ್ತು ನಿಮ್ಮ ಕೈಯ್ಯಲ್ಲೇ ಇದೆ. ನಿವಂಗೇ ಹಣವನ್ನು ಕೊಡುತ್ತೇವೆ. ನೀವೇ ಮಾಡಿಕೊಳ್ಳಿ.

ಶ್ರೀ ವಿನಯಕುಮಾರ್ ಸೊರಕೆ.—ಕಳೆದ ೧೯೮೬-೮೭ನೇ ಸಾಲಿನಲ್ಲಿ ಕೆಲವು ಹೊಸ ಕಾಮಗಾರಿಗಳನ್ನು ಬಡ್ಜೆಟ್ಟಿನಲ್ಲಿ ಸೇರಿಸಲಾಗಿತ್ತು. ಮಾನ್ಯ ಮಂತ್ರಿಗಳು ರೀಪೇರಿಯಾಗುವ ಕಾಮಗಾರಿಗಳ ಬಗ್ಗೆ ೬ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ಹೇಳಿದ್ದಾರೆ. ಕಳೆದ ಸಾಲಿನಲ್ಲಿ ಹೊಸದಾಗಿ ತೆಗೆದುಕೊಂಡಂತಹ ಕಾಮಗಾರಿಗಳನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ? ಅವುಗಳನ್ನು ಪ್ರಾರಂಭ ಮಾಡುವಂತಹ ಅವಶ್ಯಕತೆ ಇದೆಯೋ ಅಥವಾ ಇಲ್ಲವೋ ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—ಈ ಸಾಲಿನ ಬಡ್ಜೆಟ್ಟನ್ನೂ ಮಾನ್ಯ ಸಭೆಯು ಮುಂದೆ ಮಂಡಿಸಲಾಗಿದೆ. ಅದರಲ್ಲಿ ಯಾವ್ಯಾವ ಕೆಲಸಕಾರ್ಯಗಳಿಗೆ ನವ್ಯ ವ್ಯಾಪ್ತಿಯಲ್ಲಿ ಬರುತ್ತವೆಯೋ ಅವುಗಳನ್ನು ನಾವು ತೆಗೆದುಕೊಳ್ಳುತ್ತೇವೆ. ಜಿಲ್ಲಾಪರಿಷತ್ತಿನವರು ತೆಗೆದುಕೊಳ್ಳಬೇಕಾಗಿರುವಂತಹ ಕೆಲಸಕಾರ್ಯಗಳನ್ನು ಅವರಿಗೆ ವರ್ಗಾವಣೆ ಮಾಡುತ್ತೇವೆ. ಅವರು ಆ ಕೆಲಸಕಾರ್ಯಗಳನ್ನು ತೆಗೆದುಕೊಂಡು ಮಾಡುತ್ತಾರೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಕೃಷಿ ಬೆಲೆಗಳು

೧೩೦೯. **ಶ್ರೀ ಆರ್. ವೆಂಕಟರಾಮಯ್ಯ** (ಮುಳಬಾಗಿಲು).—ಮಾನ್ಯ ಕೃಷಿ ಹಾಗೂ ತೋಟಗಾರಿಕಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೃಷಿ ಬೆಲೆಗಳಿಗೆ ಸಂಬಂಧಿಸಿದ ಬಂಗಾರಪ್ಪ ಸಮಿತಿ, ಪ್ರಕಾಶ್ ಸಮಿತಿ ಮತ್ತು ಶಂಕರಿ ಕೊಪ್ಪ ಸಮಿತಿಗಳ ವರದಿಗಳನ್ನು ಸರ್ಕಾರವು ಸ್ವೀಕರಿಸಿದೆಯೇ,

ಆ) ಸದನದಲ್ಲಿ ಈ ವರದಿಗಳನ್ನು ಮಂಡಿಸಲಾಗುವುದೇ,

ಇ) ಈ ಸಮಿತಿಗಳ ಶಿಫಾರಸ್ಸುಗಳನ್ನು ಸರ್ಕಾರವು ಒಪ್ಪಿದೆಯೆ,

ಈ) ಹಾಗಿಲ್ಲದಿದ್ದರೆ ಇದರ ಬಗ್ಗೆ ಸರ್ಕಾರದ ನಿಲುವೇನು ?